**2** ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ ಬೀದರ.

ಉಪಸ್ಥಿತಿ

**ಶ್ರೀಮತಿ. ಶೋಭಾ ಬಿ.ಎಸ್.ಸಿ. ಎಲ್.ಎಲ್.ಬಿ.**

**2** ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು
ಬೀದರ
ತೀರ್ಪಿನ ದಿನಾಂಕಃ **17** ನೇ ಜುಲೈ, **2026**

ಸಿ.ಸಿ. ನಂಬರಃ**1831/2025**

ಫಿರ್ಯಾದುದಾರರುಃ

1) ಕರ್ನಾಟಕ ಸರ್ಕಾರ ನೂತನ ಪೊಲೀಸ್ ಠಾಣೆ
ಬೀದರ.
**(ಸ.ಸ.ಅ. ರವರು).**

ವಿರುದ್ಧ

ಆರೋಪಿತರುಃ

1) ಸಂತೋಷ ತಂದೆ ನರಸಿಂಗ್ ಕುಡ್ತೆನೂರ,
ವಯ:26, ಉ: ಕೂಲಿ ಕೆಲಸ,
ಸಾ: ನೌಬಾದ ಬೀದರ್.

2) ಜೊನಸನ್ ಇಲಿಜಂಟ್ ತಂದೆ ಜೈವಂತ ಇಲಿಜಂಟ್,
ವಯ:35, ಉ: ಟೀಚರ,
ಸಾ: ಪ್ರತಾಪ ನಗರ, ಬೀದರ್.

3) ಮಹಾಂತಯ್ಯಾ ತಂದೆ ರುದ್ರಯ್ಯಾ ಸ್ವಾಮಿ,
ವಯ: 56, ಉ:ಸಮಾಜ ಸೇವೆ,
ಸಾ: ಪ್ರತಾಪ ನಗರ ಬೀದರ.

**( ಶ್ರೀ ಪಿ.ಎಮ್. ಬಂಬೂಳಗೆ ವಕೀಲರು)**

| | | |
|---|---|---|
| 1. | ಅಪರಾಧ ನಡೆದ ದಿನಾಂಕ | 03.09.2023 |
| 2. | ಅಪರಾಧ ವರದಿಯ ದಿನಾಂಕ | 06.09.2023 |
| 3. | ಪ್ರಥಮ ಮಾಹಿತಿದಾರರ ಹೆಸರು | ಶ್ರೀ ಸಾಮುಯೇಲ್ |
| 4. | ಸಾಕ್ಷ್ಯವನ್ನು ಅಭಿಲೇಖಿಸುವ ಪ್ರಾರಂಭದ ದಿನಾಂಕ | 24.06.2026 |
| 5. | ಸಾಕ್ಷ್ಯವನ್ನು ಅಭಿಲೇಖಿಸುವ ಕೊನೆಯ ದಿನಾಂಕ | 15.07.2026 |
| 6. | ಆರೋಪಿತರ ವಿರುದ್ಧ ಮಾಡಲಾದ | ಭಾರತೀಯ ದಂಡ ಸಂಹಿತೆ ಕಲಂ |

| | | |
|---|---|---|
| | ಆಪಾದನೆಗಳು | 323, 504, 506 ಸಹವಾಚಕ ಕಲಂ 34. |
| 7. | ನ್ಯಾಯಾಧೀಶರ ಅಭಿಪ್ರಾಯ | ಬಿಡುಗಡೆ |

ತೀರ್ಪು

ಸಹಾಯಕ ಉಪ ನಿರೀಕ್ಷಕರು, ನೂತನ ಪೊಲೀಸರ ಠಾಣೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 324, 504, 506 ಸಹವಾಚಕ ಕಲಂ 34 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2)** ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

ದಿನಾಂಕ:03-09-2023 ರಂದು 5.00 ಪಿ.ಎಂ ಗಂಟೆಯ ಸುಮಾರಿಗೆ ಬೀದರ ನೂತನ ನಗರ ಪೋಲಿಸ್ ಠಾಣೆಯ ಸರಹದ್ದಿನಲ್ಲಿ ಬರುವ ಪ್ರತಾಪ ನಗರದಲ್ಲಿ 1 ಮತ್ತು 2 ಆರೋಪಿತರು ಚಾಸಾ-1 ರವರ ಜೊತೆ ನೌಬಾದ ಚರ್ಚ ವಿಷಯ ಬಗ್ಗೆ ಜಗಳ ಮಾಡಿದ್ದು ಆಗ ಅಲ್ಲಿಯೇ ಇದ್ದ 3 ನೇ ಆರೋಪಿ ಮಧ್ಯೆ ವಹಿಸಿ 'ಹೊದ್ರಿ ಈ ಸುಳೇ ಮಕ್ಕಳಿಗೆ ನನಗೆ ಎಲೆಕ್ಷನದಾಗ ಬೀ ಹಿಂಗೆ ಮಾಡಿ ತಕಲಿಫ್ ಕೊಟ್ಟಾರ್, ಇಟೆ ಮಾಡ್ತಾರ್ ಸುಳ್ಳೆ ಮಕ್ಕಳು' ಎಂದು ಅವಾಚ್ಯ ಶಬ್ದದಿಂದ ಬೈದಾಗ, ಆರೋಪಿತರು ಚಾಸಾ-4 ರವರ ಎದೆಯ ಮೇಲೆ ಕೈಯಿಂದ ಹೊಡೆದಿದ್ದು ನಂತರ 1 ನೇ ಆರೋಪಿತನು ಅಲ್ಲಿಯೇ ಬಿದ್ದಿದ್ದ ಒಂದು ಕಪ್ಪು ಕಲನ್ನು ತೆಗೆದುಕೊಂಡು ಚಾಸಾ-1 ರವರ ಎದೆಯ ಎಡಭಾಗದಲ್ಲಿ ಹೊಡೆದು ಗಾಯ ಪಡಿಸಿದ್ದು ನಂತರ 1 ಮತ್ತು 2 ನೇ ಆರೋಪಿತರು 'ರಂಡಿ ಮಕ್ಕಳೇ ಇವತ್ ನಿಮಗೆ ಇಲ್ಲೆ ಖತಮ ಮಾಡಹಾಕತೇವ್ ಈ ಉರಾಗ ನಿನಗೆ ಬದುಕೊಡಲೇವ್' ಅಂತ ಬೈದು ಜೀವ ಬೆದರಿಕೆ ಹಾಕಿರುತ್ತಾರೆ. ಘಟನೆ ಕುರಿತು ಚಾಸಾ-1 ರವರು ದೂರನ್ನು ಕೊಟ್ಟಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಬೀದರ ನೂತನ ಪಿ.ಎಸ್ ತಮ್ಮ ಠಾಣೆ ಮೊಕದ್ದಮೆ ಸಂಖ್ಯೆ: 145/2023 ನೇದ್ದರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ.ವ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪಂಚನಾಮೆ ಮುಖಾಂತರ ಪಂಚರ ಸಮಕ್ಷಮ ಅಪಘಾತ ಸ್ಥಳ ಪಂಚನಾಮಾ ಪಡಿಸಿಕೊಂಡು ಹೇಳಿಕೆಗಳನ್ನು ದಾಖಲು ಮಾಡಿಕೊಂಡು ಇನ್ನಿತರ ತನಿಖೆ ಪೂರೈಸಿ, ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 324, 504, 506 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ದೋಷಾರೋಪಣೆ ಪತ್ರ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

**3)** ತನಿಖಾಧಿಕಾರಿಯು ಪ್ರಕರಣದ ತನಿಖೆ ಮುಕ್ತಾಯವಾದ ನಂತರ ಆರೋಪಿತರ ವಿರುದ್ಧ ಭಾ.ದಂ.ಸಂ.324, 504, 506 ಸಹವಾಚಕ ಕಲಂ 34 ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅಪರಾಧಗಳಿಗೆ ಸಂಜ್ಞೆ ತೆಗೆದುಕೊಂಡು ರಿಜಿಸ್ಟರ್ ಸಂಖ್ಯೆ 3 ರಲ್ಲಿ ನೊಂದಾಯಿಸಿ ಆರೋಪಿತರಿಗೆ ನ್ಯಾಯಾಲಯದಿಂದ ಸಮನ್ಸ ನೀಡಲಾಗಿ, ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ, ದಂ.ಪ್ರ.ಸಂ. ಕಲಂ 207 ರಲ್ಲಿ ಆರೋಪಿರಿಗೆ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಪೂರೈಸಿಲಾಯಿತು. ನಂತರ ಆರೋಪಿತರ ವಿರುದ್ಧ ಭಾ.ದಂ.ಸಂ. 324, 504, 506 ಸಹವಾಚಕ ಕಲಂ 34 ರಡಿಯಲ್ಲಿ ದೋಷಾರೋಪಣೆ ರಚಿಸಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಯಿತು. ಆರೋಪಿತರು ತಮ್ಮ ವಿರುದ್ಧ ದೋಷಾರೋಪಣೆ ಅಲ್ಲಗಳೆದು ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**4)** ಅಭೀಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಇಬ್ಬರ ಸಾಕ್ಷಿದಾರರನ್ನು ಫ್ರಾಸಾ-1 ಮತ್ತು 2 ರಂತೆ ವಿಚಾರಣೆಗೆ ಒಳಪಡಿಸಿಕೊಂಡು 03 ದಾಖಲೆಗಳನ್ನು ನಿಪಿ-1 ರಿಂದ 2 ರಂತೆ ಗುರುತಿಸಿಕೊಂಡಿರುತ್ತಾರೆ. ಫ್ರಾಸಾ-1 ಮತ್ತು 2 ರವರು ಅಭಿಯೋಜನೆಗೆ ಸಕರಾತ್ಮಕ ಸಾಕ್ಷ್ಯ ನುಡಿಯದೆ ಇದ್ದ ಕಾರಣ ದಂ.ಪ್ರ.ಸಂ. ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆ ಮನ್ನಾ ಮಾಡಲಾಯಿತು.

**5)** ಕಡತದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ತಿರ್ಮಾನಕ್ಕಾಗಿ ಬಂದಿರುತ್ತವೆಃ

<u>ಅಂಶಗಳು</u>

> <u>ಅಂಶ**-1:**</u> ದಿನಾಂಕಃ 03-09-2023 ರಂದು 5.00 ಪಿ.ಎಂ ಗಂಟೆಯ ಸುಮಾರಿಗೆ ಬೀದರ ನೂತನ ನಗರ ಪೋಲಿಸ್ ಠಾಣೆಯ ಸರಹದ್ದಿನಲ್ಲಿ ಬರುವ ಪ್ರತಾಪ ನಗರದಲ್ಲಿ 1 ಮತ್ತು 2 ಆರೋಪಿತರು ಚಾಸಾ-1 ರವರ ಜೊತೆ ನೌಬಾದ ಚರ್ಚ ವಿಷಯ ಬಗ್ಗೆ ಜಗಳ ಮಾಡಿದ್ದು ಆಗ ಅಲ್ಲಿಯೇ ಇದ್ದ 3 ನೇ ಆರೋಪಿ ಮಧ್ಯೆ ವಹಿಸಿ 'ಹೊಡ್ರಿ ಈ ಸುಳೇ ಮಕ್ಕಳಿಗೆ ನನಗೆ ಎಲೆಕ್ಷನದಾಗ ಬೀ ಹಿಂಗೆ ಮಾಡಿ ತಕಲಿಫ್ ಕೊಟ್ಟಾರ್, ಇಟೆ ಮಾಡ್ತಾರ್ ಸುಳ್ಳೆ ಮಕ್ಕಳು' ಎಂದು ಅವಾಚ್ಯ ಶಬ್ದದಿಂದ ಬೈದ ಆ

ಮೂಲಕ ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ಸಾಭೀತು ಪಡಿಸುತ್ತದಯೇ?

<u>ಅಂಶ**-2:**</u> ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಾಗೆ, ಆರೋಪಿತರು ಚಾಸಾ-4 ರವರ ಎದೆಯ ಮೇಲೆ ಕೈಯಿಂದ ಹೊಡೆದಿದ್ದು, 1 ನೇ ಆರೋಪಿತನು ಅಲ್ಲಿಯೇ ಬಿದ್ದಿದ್ದ ಒಂದು ಕಪ್ಪು ಕಲನ್ನು ತೆಗೆದುಕೊಂಡು ಚಾಸಾ-1 ರವರ ಎದೆಯ ಎಡಭಾಗದಲ್ಲಿ ಹೊಡೆದು ಗಾಯಪಡಿಸಿದ್ದು ಆ ಮೂಲಕ ಭಾ.ದಂ.ಸಂ. ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ಸಾಭೀತು ಪಡಿಸುತ್ತದಯೇ?

<u>ಅಂಶ**-3:**</u> ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟಾಗೆ, 1 ಮತ್ತು 2 ನೇ ಆರೋಪಿತರು 'ರಂಡಿ ಮಕ್ಕಳೇ ಇವತ್ ನಿಮಗೆ ಇಲ್ಲೆ ಖತಮ ಮಾಡಹಾಕತೇವ್ ಈ ಉರಾಗ ನಿನಗೆ ಬದುಕೊಡಲೇವ್' ಅಂತ ಬೈದು ಜೀವ ಬೆದರಿಕೆ ಹಾಕಿದ್ದು ಆ ಮೂಲಕ ಭಾ.ದಂ.ಸಂ. ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ಸಾಭೀತು ಪಡಿಸುತ್ತದಯೇ?

<u>ಅಂಶ**-4:**</u>ಏನು ಆದೇಶ?

**6)** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ 1:- ನಕಾರಾತ್ಮಕ
ಅಂಶ 2:- ನಕಾರಾತ್ಮಕ
ಅಂಶ 3:- ನಕಾರಾತ್ಮಕ
ಅಂಶ 4:- ಯಾವ ಕಾರಣಗಳಿಗಾಗಿ.

<u>ಕಾರಣಗಳು</u>

**7)** <u>ಅಂಶ **1** ರಿಂದ **3 :-**</u> ಅಭಿಯೋಜನೆಯ ತನ್ನ ಪ್ರಕರಣವನ್ನು ಸಾಭೀತುಪಡಿಸಲು ಎರಡು ಸಾಕ್ಷಿದಾರರನ್ನು ಫ್ರಾಸಾ 1 ಮತ್ತು 2 ರಂತೆ ವಿಚಾರಣೆಗೆ ಒಳಪಡಿಸಿಕೊಂಡು 03

ದಾಖಲೆಗಳನ್ನು ನಿಪಿ-1 ರಿಂದ 3 ರಂತೆ ನಿಶಾನೆಗೊಳಿಸಿಕೊಂಡಿರುತ್ತದೆ. ಫ್ರಾಸಾ-1 ಸಾಮಯೇಲ್ ಇವರು ಪಿರ್ಯಾದಿದಾರರಿದ್ದು, ಫ್ರಾಸಾ-2 ಅನೋಕ ಇವರು ಪ್ರತ್ಯಕ್ಷ ಸಾಕ್ಷಿದಾರರಿದ್ದು ನಿಪಿ-1 ದೂರು, ನಿಪಿ-2 ಫ್ರಾಸಾ-1 ರವರ ಪುರಾಣೆ ಹೇಳಿಕೆ ಮತ್ತು ನಿಪಿ-3 ಫ್ರಾಸಾ-2 ರವರ ಪುರಾಣೆ ಹೇಳಿಕೆ ಆಗಿರುತ್ತವೆ.

**8)** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವನ್ನು ಈಗಾಗಲೇ ಹೇಳಲಾಗಿರುತ್ತದೆ.

**9)** ಫ್ರಾಸಾ-1 ಸಾಮಯೇಲ್ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ಆರೋಪಿತರು ತಮಗೆ ಅವಾಚ್ಯ ಶಬ್ದದಿಂದ ಬೈದಿಲ್ಲ ಕಲ್ಲಿನಿಂದ ಹೊಡದಿಲ್ಲ, ಜೀವದ ಬೇದರಿಕೆ ಹಾಕಿಲ್ಲ ತನ್ನ ಹಾಗೂ ಆರೋಪಿತರ ಮಧ್ಯ ಬಾಯಿ ಮಾತಿನ ಜಗಳ ಆಗಿದ್ದು ಆ ಸಿಟ್ಟಿನಲ್ಲಿ ದೂರನ್ನು ಕೊಟ್ಟಿರುತ್ತಾರೆ ಎಂದು ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ.

**10)** ಫ್ರಾಸಾ**-2** ಇವರು ತಮ್ಮ ವಿಚಾರಣೆ ವೇಳೆಯಲ್ಲಿ ಆರೋಪಿತರು ಚಾಸಾ-1 ಇವರಿಗೆ ಅವಾಚ್ಯ ಶಬ್ದದಿಂದ ಬೈದಿಲ್ಲ ಕಲ್ಲಿನಿಂದ ಹೊಡದಿಲ್ಲ, ಜೀವದ ಬೇದರಿಕೆ ಹಾಕಿಲ್ಲ, ಆರೋಪಿತರು ತನ್ನ ಎದೆಮೇಲೆ ಕೈಯಿಂದ ಹೊಡೆದಿಲ್ಲ, ತಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸದರಿ ಸಾಕ್ಷಿದಾರರನ್ನು ಪಾಟಿ ಸವಾಲಿಗೆ ಒಳಪಡಿಸಿಕೊಂಡರೂ ಸಹ, ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶವನ್ನು ಹೇಳಿಸುವುದರಲ್ಲಿ ವಿಫಲರಾಗಿರುತ್ತಾರೆ. ಫ್ರಾಸಾ-1 ರವರು ನೀಪಿ-1 ರಲ್ಲಿ ಹೇಳಿದಂತಹ ವಿಷಯಗಳಿಗೆ ಪೂರಕವಾಗಿ ಸಕ್ಷಿ ನುಡಿದಿರುವುದಿಲ್ಲ. ಆದ ಕಾರಣ ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ನಿಸಂಶಯವಾಗಿ ಸಾಭಿತುಪಡಿಸಲು ನನ್ನ ಅಭಿಪ್ರಾಯದಲ್ಲಿ ವಿಫಲರಾಗಿರುತ್ತಾರೆ. ಪ್ರಕರಣದ ಸಮಯ, ಸನ್ನಿವೇಶ ಹಾಗೂ ಸಂಧರ್ಬಗಳನ್ನು ಕುಲಂಕುಶವಾಗಿ ಪರಿಶೀಲಿಸಿದಾಗ ಅಭಯೋಜನೆ ಪ್ರಕರಣವು ಸಂಶಯದಿಂದ ಕೂಡಿದ್ದು ಅಂತಹ ಸಂಶಯದ ಲಾಭವನ್ನು ಆರೋಪಿತರು ಪಡೆಯಲು ಅರ್ಹರಾಗಿರುತ್ತಾರೆ ಎಂಬ ತಿರ್ಮಾನದೊಂದಿಗೆ ಮೇಲಿನ ಅಂಶ 1 ರಿಂದ 3 ನಕರಾತ್ಮಕವಾಗಿ ಉತ್ತರಿಸಿಸುತ್ತಿದ್ದೇನೆ.

**11)** <u>ಅಂಶ **4**:</u>- ಈ ಮೇಲಿನ ಎಲ್ಲಾ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆಃ

## ಆದೇಶ

ದಂ.ಪ್ರ.ಸಂ.ಕಲಂ.248 (1) ರ ಅಡಿಯಲ್ಲಿ ನೀಡಿರುವ ಅಧಿಕಾರದ ಅಡಿ ಆರೋಪಿ ನಂ.1 ರಿಂದ 3 ರವರನ್ನು ಭಾ. ದಂ. ಸಂ. ಕಲಂ 324, 504, 506 ಸಹವಾಚಕ ಕಲಂ 34 ರಡಿಯಲ್ಲಿನ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

1 ರಿಂದ 3 ನೇ ಆರೋಪಿತರ ಹಾಗೂ ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದು ಪಡಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ ಬೆರಳಚ್ಚಾದ ನಂತರ ತಿದ್ದುಪಡಿ ಮಾಡಿ ತೆರದ ನ್ಯಾಯಾಲಯದಲ್ಲಿ ದಿನಾಂಕ: 17.07.2026 ರಂದು ಘೋಷಿಸಲಾಯಿತು.)

**(ಶೋಭಾ)**
**2** ನೇ ಹೇಚುವರಿ ಹಿರಿಯಾ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು
ಬೀದರ**.**

## ಅನುಬಂಧ

ಅಭಿಯೋಜನೆ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:

ಪ್ರಾಸಾ 1 : ಸಾಮಯೇಲ್.
ಪ್ರಾಸಾ 2 : ಅನೋಕ.

ಅಭಿಯೋಜನೆ ಪರ ಗುರ್ತಿಸಿದ ದಾಖಲೆಳು ಪಟ್ಟಿ:

ನಿಪಿ 1 : ದೂರು.
ನಿಪಿ 2 : ಪ್ರಾಸಾ-1 ರವರ ಪುರಾಣೆ ಹೇಳಿಕೆ.
ನಿಪಿ-3 : ಪ್ರಾಸಾ-2 ರವರ ಪುರಾಣೆ ಹೇಳಿಕೆ.

ಆರೋಪಿತರ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ ಮತ್ತು ದಾಖಲೆಗಳು:

ಇರುವುದಿಲ್ಲ.

**(ಶೋಭಾ)**
**2** ನೇ ಹೇಚುವರಿ ಹಿರಿಯಾ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು
ಬೀದರ**.**